**CW : 2**

PW : 1

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.458/2024

| | | |
|---|---|---|
| ಸಾಕ್ಷಿದಾರರ ಹೆಸರು | : | ಸಂದೀಪ್ |
| ತಂದೆಯ ಹೆಸರು | : | ಬಾಬು ನಾಯಕ್ |
| ಪ್ರಾಯ | : | 25 ವರ್ಷ |
| ಉದ್ಯೋಗ | | ಆಟೋ ಚಾಲಕ |
| ವಾಸಸ್ಥಳ | : | ಕುಂಬ್ರ, ಅರಿಯಡ್ಕ ಗ್ರಾಮ |

ದಿನಾಂಕಃ**12.08.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಮೃತ ಸುಂದರ ಪೂಜಾರಿಯವರ ಪರಿಚಯ ಇತ್ತು. ದಿ.15-02-2024 ರಂದು ನಾನು ಕುಂಬ್ರದಿಂದ ಪಟ್ಟೆಗೆ ಪ್ರಯಾಣಿಕರನ್ನು ಬಿಟ್ಟು ನನ್ನ ಆಟೋದಲ್ಲಿ ಕುಂಬ್ರದ ಕಡೆಗೆ ಬರುತ್ತಿದ್ದಾಗ ಕೌಡಿಚ್ಚಾರಿನ ಹತ್ತಿರ ಪಳ್ಳ ಎಂಬಲ್ಲಿ ಮದ್ಯಾಹ್ನ 12.40 ರ ಸಮಯಕ್ಕೆ ತಲುಪಿದಾಗ ಕುಂಬ್ರದ ಕಡೆಯಿಂದ ಕೌಡಿಚ್ಚಾರಿನ ಕಡೆಗೆ ಬೈಕಿನಲ್ಲಿ ಸುಂದರ ಪೂಜಾರಿ ಬರುತ್ತಿದ್ದರು. ಅವರ ಹಿಂದೆ ಒಂದು ಪಿಕಪ್ ವಾಹನ ಬರುತ್ತಿತ್ತು. ನನಗೆ ಒಂದು ಶಬ್ದ ಕೇಳಿಬಂತು. ನಾನು ಆಟೋವನ್ನು ರಸ್ತೆಯ ಪಕ್ಕಕ್ಕೆ ನಿಲ್ಲಿಸಿ ಶಬ್ದ ಬಂದ ಕಡೆ ಹೋಗಿ ನೋಡಿದಾಗ ಸ್ಥಳದಲ್ಲಿ ಸಂದರ ಪೂಜಾರಿ ಬರುತ್ತಿದ್ದ ಬೈಕಿಗೆ ಪಿಕಪ್ ವಾಹನ ಡಿಕ್ಕಿಪಡಿಸಿದ್ದು ಕಂಡುಬಂತು. ಸ್ಥಳದಲ್ಲಿ ಸುಂದರ ಪೂಜರಿಯವರಿಗೆ ಪೆಟ್ಟಾಗಿ ಅವರು ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಸ್ಥಳದಲ್ಲಿ ಪಿಕಪ್ ವಾಹನದ ಚಾಲಕ ಸಹ ಇದ್ದರು. ಗಾಯಗೊಂಡಿದ್ದ ಸುಂದರ ಪೂಜಾರಿಯವರನ್ನು ನನ್ನ ಆಟೋನಲ್ಲಿ ಧನ್ವಂತರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ ಸೇರಿಸಿದೆನು. ಆಸ್ಪತ್ರೆಯಲ್ಲಿ ಮದ್ಯಾಹ 2.30 ರ ಸಮಯಕ್ಕೆ ಸುಂದರ ಪೂಜಾರಿಯವರು ಚಿಕಿತ್ಸೆ ಫಲಕಾರಿಯಾಗದೆ ಮೃತರಾದರು. ಪುತ್ತೂರಿನ ಸರ್ಕಾರೀ ಆಸ್ಪತ್ರೆಯಲ್ಲಿ ನಂತರ ಸುಂದರ ಪೂಜಾರಿಯವರ ಶವಪರೀಕ್ಷೆ ನಡೆಯಿತು. ಅಲ್ಲಿ ನಾನು ಸುಂದರ ಪೂಜಾರಿಯವರ ಶವವನ್ನು ಗುರುತಿಸಿರುತ್ತೇನೆ.

ಅಪಘಾತ ಪಿಕಪ್ ವಾಹನದ ಚಾಲಕನ ಅಜಾಗರೂಕತೆಯ ವಾಹನ ಚಾಲನೆಯಿಂದ ಆಗಿರುತ್ತದೆ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ.

ಪಿಕಪ್ ವಾಹನದ ಚಾಲಕನನ್ನು ನೋಡಿದರೆ ಗುರುತಿಸಬಲ್ಲೆ. ಆರೋಪಿಯು ಈ ದಿನ ನ್ಯಾಯಾಲಯಕ್ಕೆ ಗೈರುಹಾಜರಾಗಿದ್ದು ಆತನ ಗುರುತಿಸುವಿಕೆ ಬಗ್ಗೆ ಆರೋಪಿ ಪರ ವಕೀಲರು ತಮ್ಮ ತಕರಾರು ಏನೂ ಇಲ್ಲ ಎಂದು ಹೇಳಿರುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ-1 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು.

ನಿಪಿ.1 ಕ್ಕೆ ನಾನು ದಿ.17.02.2024 ರಂದು ಅಪಘಾತ ನಡೆದ ಸ್ಥಳದಲ್ಲಿ ಮಹಜರು ಮಾಡಲು ಬಂದಾಗ ಸಹಿ ಮಾಡಿದ್ದೇನೆ. ಸ್ಥಳಕ್ಕೆ ಪೊಲೀಸರು ಬಂದಿದ್ದರು. ನಾನು ಅಪಘಾತವಾದ ಸ್ಥಳವನ್ನು ಪೊಲೀಸರಿಗೆ ತೋರಿಸಿದ್ದೇನೆ. ಪೊಲೀಸರು ಅಪಘಾತಕ್ಕೊಳಪಟ್ಟ ಬೈಕನ್ನು ತಮ್ಮ ವಶಕ್ಕೆ ಪಡೆದಿದ್ದಾರೆ. ಪೊಲೀಸರು ತಮ್ಮ ವಶಕ್ಕೆ ಪಡೆದ ಬೈಕನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಒಂದು ಭಾವಚಿತ್ರದಲ್ಲಿ ಕಾಣುವ ಬೈಕನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಭಾವಚಿತ್ರವನ್ನು ನಿಪಿ-2 ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿ ಸಾಕ್ಷಿ ತಾನಿರುವುದನ್ನು ನೋಡಿ ಗುರುತಿಸಿರುತ್ತಾರೆ. ಅಪಘಾತಪಡಿಸಿದ ಪಿಕಪ್ ವಾಹನವನ್ನು ನೋಡಿದರೆ ಗುರುತಿಸಬಲ್ಲೆ.

ಸಾಕ್ಷಿಯು ಪಿಕಪ್ ವಾಹನದ 4 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿ-3 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ-4 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.4 ಎ ಎಂದು ಗುರುತಿಸಲಾಯಿತು. ಅಪಘಾತ ಆದ ನಂತರ ಪಿಕಪ್ ವಾಹನದ ಚಾಲಕ ತನ್ನ ವಾಹನವನ್ನು ತೆಗೆದುಕೊಂಡು ಸ್ಥಳದಿಂದ ಹೋಗಿರುತ್ತಾನೆ.

<u>ಪಾಟೀ ಸವಾಲುಃಆರೋಪಿತರ ಪರ ಶ್ರೀ ಎಮ್ ಎಮ್ ವಕೀಲರಿಂದಃ</u>

ನಾನು ನನ್ನ ರಿಕ್ಷಾವನ್ನು ಕುಂಬ್ರದಲ್ಲಿ ಪಾರ್ಕಿಂಗ್ ಮಾಡುತ್ತೇನೆ. ಕುಂಬ್ರದಿಂದ 8-9 ಕಿ ಮೀ ದೂರದಲ್ಲಿರುವ ಪಟ್ಟೆಗೆ ಹೋಗಿದ್ದೆನು. ಕುಂಬ್ರದಿಂದ ಕೌಡಿಚ್ಚಾರಿಗೆ 3 ಕಿ ಮೀ ದೂರವಾಗುತ್ತದೆ. ಮೃತ ಸುಂದರ ಪೂಜರಿರರವರ ಪರಿಚಯ ಅಪಘಾತಕ್ಕೂ ಮೊದಲೇ ಇತ್ತು. ಅವರು ನನಗೆ ಆಗಾಗ್ಗ

ಕುಂಬ್ರದಲ್ಲಿ ಸಿಗುತ್ತಿದ್ದರು. ನಾನು ಪಟ್ಟೆಗೆ ತಲುಪಿದಾಗ 12.15 ರಿಂದ 12.20 ಆಗಿರಬಹುದು. ನನಗೆ ಕೌಡಿಚ್ಚಾರಿನಲ್ಲಿ ಯಾವುದೇ ಪ್ರಯಾಣಿಕರು ಸಿಕ್ಕಿಲ್ಲ.

ಕೌಡಿಚ್ಚಾರಿನಿಂದ ಸುಮಾರು 200 ಮೀಟರ್ ಕಳೆದ ಮೇಲೆ ಬೈಕ್ ಬರುತ್ತಿದ್ದುದು ನೋಡಿದ್ದೇನೆ. ಬೈಕು ಕುಂಬ್ರದಿಂದ ಬರುತ್ತಿತ್ತು. ಸುಮಾರು 100 ಮೀಟರ್‌ಗಳ ದೂರದಿಂದ ಬೈಕನ್ನು ನಾನು ನೋಡಿದ್ದೇನೆ. ಬೈಕು ನಿಧಾನವಾಗಿ ಬರುತ್ತಿತ್ತು. ಪಿಕಪ್ ವಾಹನ ಬೈಕಿನಿಂದ ಸುಮಾರು 2-3 ಅಡಿ ಅಂತರದಲ್ಲಿತ್ತು. ಪಿಕಪ್ ವಾಹನ ಕೂಡಾ ನಿಧಾನವಾಗಿ ಬರುತ್ತಿತ್ತು. ಪಿಕಪ್ ವಾಹನವನ್ನು ನಾನು ಸುಮಾರು 7 ಮೀಟರ್ ದೂರದಿಂದ ನೋಡಿದ್ದೆನೆ.

ಅಪಘಾತ ಆಗಿದೆ ಎಂದು ನನಗೆ ಶಬ್ದ ಕೇಳಿದ ನಂತರ ಗೊತ್ತಾಗಿದೆ. ಅಪಘಾತವನ್ನು ನಾನು ಪ್ರತ್ಯಕ್ಷ ನೋಡಿಲ್ಲ. ಆದಕಾರಣ ಈ ಅಪಘಾತ ಯಾರ ತಪ್ಪಿನಿಂದ ಆಗಿದೆ ಎಂದು ಹೇಳಲಾಗುವುದಿಲ್ಲ ಎಂದರೆ ಸಾಕ್ಷಿಯು ಪಿಕಪ್ ವಾಹನದ ಚಾಲಕನ ತಪ್ಪಿನಿಂದ ಅಪಘಾತ ಆಗಿದೆ ಎಂದು ನುಡಿಯುತ್ತಾರೆ.

ಮೃತ ಸುಂದರ ಪೂಜಾರಿ Half ಹೆಲ್ಮೆಟ್ ಧರಿಸಿದ್ದ ಕಾರಣ ನಾನು ಅವರನ್ನು ಗುರುತಿಸಿದ್ದೇನೆ. ಮೃತ ಸುಂದರ ಪೂಜಾರಿಯವರು ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ.

ಅಪಘಾತ ಸ್ಥಳದಲ್ಲಿ ಡಾಂಬರು ರಸ್ತೆ ಎಷ್ಟು ಅಗಲ ಇದೆ ಎಂದರೆ ಸಾಕ್ಷಿಯು ಮೌನವಾಗಿರುತ್ತಾರೆ. ಡಾಂಬರು ರಸ್ತೆಯಿಂದ ಬಲ ಅಂಚಿಗೆ ಕಚ್ಚಾ ರಸ್ತೆಯಿರುತ್ತದೆ. ಅದು 2 ಅಡಿಗಳಷ್ಟು ಅಗಲ ಇರುತ್ತದೆ. ನಾನು ನೋಡಿದಾಗ ಬೈಕು ರಸ್ತೆಯ ಎಡಬದಿಗೆ ಬಿದ್ದಿತ್ತು. ಬೈಕಿನ ಮುಂಭಾಗ ಮತ್ತು ಹಿಂದಿನ ಭಾಗ ಜಖಂಗೊಂಡಿತ್ತು. ನಾನು ಸ್ಥಳಕ್ಕೆ ಹೋದಾಗ ಇನ್ನು 4-5 ಜನ ಇದ್ದರು. ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ಅಲ್ಲಿ ಅವರು ಇದ್ದರು. ನನ್ನ ರಿಕ್ಷಾದಿಂದ ಸುಮಾರು 100 ಮೀಟರ್‌ಗಳ ಅಂತರದಲ್ಲಿ ಅಪಘಾತ ಆಗಿದೆ. ನಾನು ರಿಕ್ಷಾ ನಿಲಿಸಿ ಅಪಘಾತ ಸ್ಥಳಕ್ಕೆ ಮುಟ್ಟುವಾಗ 5 ನಿಮಿಷ ಆಗಿತ್ತು.

ಅಲ್ಲಿ ಇದ್ದ ಜನರು ನನ್ನನ್ನು ಗಾಯಾಳುವನ್ನು ಆಸ್ಪತ್ರೆಗೆ ಸೇರಿಸಲು ತಿಳಿಸಿದರು. ನಾನು ಒಬ್ಬನೇ ಗಾಯಾಳುವನ್ನು ಆಸ್ಪತ್ರೆಗೆ ಸೇರಿಸಿದ್ದೇನೆ. ಬೈಕ್ ಸವಾರರು ಪುನಃ ನಾನು ಅಪಘಾತ ಸ್ಥಳಕ್ಕೆ ಮಹಜರು ಮಾಡುವ ಕಾಲಕ್ಕೆ ಹೋಗಿದ್ದೆನು. ನಾನು ಮಹಜರು ಮಾಡುವ ಕಾಲಕ್ಕೆ ಸ್ಥಳಕ್ಕೆ ಹೋದಾಗ ಸುಂದರ ಪೂಜಾರಿ ಓಡಿಸುತ್ತಿದ್ದ ಬೈಕ್ ಮಾತ್ರ ಅಲ್ಲಿ ಇತ್ತು. ಮಹಜರು ಕಾಲದಲ್ಲಿ ನಾನು ಹೇಳಿದಂತೆ ಬೈಕು ಇರಲೇ ಇಲ್ಲ ಎಂದರೆ ಸರಿಯಲ್ಲ. ಮಹಜರು ಕಾಲದಲ್ಲಿ ಒಟ್ಟು 6 ಜನ ಇದ್ದರು. ಅಲ್ಲಿ ಇದ್ದ ವ್ಯಕ್ತಿಗಳ ಹೆಸರು ಈಗ ನೆನಪಿಲ್ಲ. ನಾನು ಅಪಘಾತ ಸ್ಥಳಕ್ಕೆ ಹೋಗಿಲ್ಲ ಬದಲಾಗಿ ಒಂದು ತಯಾರಿಸಿದ ಮಹಜರಿಗೆ ಪೋ. ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮಹಜರು ಕಾಲದಲ್ಲಿ ಒಂದು ನಕ್ಷೆಯನ್ನು ತಯಾರಿಸಲಾಗಿದೆ. ಅದನ್ನು ಯಾರು ತಯಾರಿಸಿದರು ಎಂದು ಗೊತ್ತಿಲ್ಲ. ಮಹಜರು ಸ್ಥಳದ ಚೆಕ್ಬಂದಿ ಹೇಳಲಾಗುವುದಿಲ್ಲ. ಪಿಕಪ್ ವಾಹನದ ಚಾಲಕ ಆಸ್ಪತ್ರೆಗೆ ಬರದಿದ್ದುದು ಹಾಗೂ ಸ್ಥಳದಲ್ಲಿ ಇಲ್ಲದಿರುವುದು ನನಗೆ ಬೇರೆಯವರು ಹೇಳಿದ ಕಾರಣ ಗೊತ್ತಾಯಿತು. ನಾನು ಆಸ್ಪತ್ರೆಯಲ್ಲಿ 20 ನಿಮಿಷಗಳ ಕಾಲ ಇದ್ದೆನು.

ಪಿಕಪ್ ವಾಹನದ ಚಾಲಕ ಆಸ್ಪತ್ರೆಗೂ ಕೂಡಾ ಬಂದಿದ್ದರು ಹಾಗೆಯೇ ಪೋ. ಠಾಣೆಗೂ ಕೂಡಾ ಬಂದಿದ್ದರು ಎಂದರೆ ನನೆಗ ಗೊೀತ್ತಿಲ್ಲ. ಮೃತ ಸುಂದರ ಪೂಜಾರಿ ನನ್ನ ಪರಿಚಯಸ್ಥರಾದ ಕಾರಣ ಅವರ ಕುಟುಂಬದವರಿಗೆ ಅಪಘಾತ ಸಂಬಂಧಿತ ಪರಿಹಾರ ದೊರಕಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೋಟಾರು ಬೈಕ್ ಸವಾರನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಅಪಘಾತ ಪಿಕಪ್ ವಾಹನದ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಅಪಘಾತ ಆದ ದಿನವೇ ಸಂಜೆ ಠಾಣೆಯಲ್ಲಿ ನಾನು ಹೇಳಿಕೆ ಕೊಟ್ಟಿದ್ದೇನೆ.

ಈ ಪ್ರಕರಣಕ್ಕೂ ಹಾಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಆದರೂ ಕೂಡಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ-4 ನಕ್ಷೆಗೆ ನಾನು ಪೋ. ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.

**CW : 2**

PW : 1